KARNATAKA LEGISLATIVE ASSEMBLY, RESEARCH AND REFERENCE BRANCH
ಪತ್ರಿಕಾ ತುಣುಕುಗಳು
PAPER CLIPPINGS
ಶಾಖೆ / ವಿಷಯ : DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER:
ದಿನಾಂಕ : DATE :

# ಹೊಳಪು ಕಳೆದುಕೊಂಡ ಬೆಳಗಾವಿ 'ಸುವರ್ಣ' ವಿಧಾನಸೌಧ

• ಕೇಶವ ಆದಿ

ಬೆಳಗಾವಿ: ಸರ್ಕಾರದ ಪ್ರಮುಖ ಕಚೇರಿಗಳು ಬರಲಿಲ್ಲ. ಉತ್ತರ ಕರ್ನಾಟಕದ ಜನರ ಕೂಗಿಗೆ ಸ್ಪಂದಿಸುವ ಕೆಲಸವೂ ಆಗಲಿಲ್ಲ. ಕೊನೆಗೆ ಸಾಕಷ್ಟು ನಿರೀಕ್ಷೆ ಹುಟ್ಟಿಸಿದ್ದ ಚಳಿಗಾಲದ ಅಧಿವೇಶನವೂ ಇಲ್ಲ!

ಇದು ಉತ್ತರ ಕರ್ನಾಟಕದ ಶಕ್ತಿಕೇಂದ್ರ ಎಂದು ಗುರುತಿಸಿಕೊಂಡಿರುವ ಬೆಳಗಾವಿಯ ಸುವರ್ಣ ವಿಧಾನ ಸೌಧದ ಸದ್ಯದ ದುಸ್ಥಿತಿ. ಸರ್ಕಾರದ ನಿರ್ಧಾರದಿಂದ ಸತತ ಎರಡನೇ ವರ್ಷವೂ ಸುವರ್ಣ ವಿಧಾನಸೌಧ ಚಳಿಗಾಲದ ಅಧಿವೇಶನದಿಂದ ವಂಚಿತಗೊಂಡಿದೆ.

ಉತ್ತರ ಕರ್ನಾಟಕದ ಅಭಿವೃದ್ಧಿಗೆ ಅನುಕೂಲವಾಗುವಂತೆ ಸುವರ್ಣ ವಿಧಾನಸೌಧದಲ್ಲಿ ಪ್ರತಿ ವರ್ಷ ಒಂದು ತಿಂಗಳ ಕಾಲ ಅಧಿವೇಶನ ನಡೆಸಬೇಕೆಂಬ ಈ ಭಾಗದ ಜನರ ಕೂಗಿಗೆ ಸರ್ಕಾರ ಬೆಲೆ ಕೊಟ್ಟಿಲ್ಲ. ಕಳೆದ ವರ್ಷ ಭೀಕರ ಪ್ರವಾಹದಿಂದ ಆದ ಹಾನಿಯ ಕಾರಣದಿಂದ ಅಧಿವೇಶನ ರದ್ದು ಮಾಡಿದ್ದರೆ, ಈ ಬಾರಿ ಕೊರೊನಾ ನೆಪ ಮುಂದೆ ಮಾಡಿದೆ. ಹೀಗಾಗಿ ಸತತ ಎರಡನೇ ವರ್ಷವೂ ಸುವರ್ಣ ವಿಧಾನಸೌಧಕ್ಕೆ ಅಧಿವೇಶನದ ಭಾಗ್ಯವಿಲ್ಲ. 2018ರಲ್ಲಿ ನಡೆದ ಅಧಿವೇಶನವೇ ಕೊನೆಯದಾಗಿದೆ.

ಕೊರೊನಾ ಕಾರಣದಿಂದ ಚಳಿಗಾಲ ಅಧಿವೇಶನವನ್ನು ಬೆಂಗಳೂರಲ್ಲಿಯೇ ನಡೆಸಲು ತೀರ್ಮಾನ ಮಾಡಿರುವ ಸಿಎಂ ಯಡಿಯೂರಪ್ಪ ಉತ್ತರ ಕರ್ನಾಟಕಕ್ಕೆ ಅದರಲ್ಲೂ ಗಡಿ ಭಾಗದ ಬೆಳಗಾವಿಗೆ ಮತ್ತೆ ಅನ್ಯಾಯ ಮಾಡಿದ್ದಾರೆ. ಎರಡು ವರ್ಷಗಳಿಂದ ಬೆಳಗಾವಿಯಲ್ಲಿ ಅಧಿವೇಶನ ನಡೆಸದೆ ತಾವೇ ಶಂಕುಸ್ಥಾಪನೆ ನೆರವೇರಿಸಿದ್ದ ಸುವರ್ಣ ವಿಧಾನಸೌಧವನ್ನು ನಿರ್ಲಕ್ಷ್ಯ ಮಾಡುವ ಮೂಲಕ ಉತ್ತರ ಕರ್ನಾಟಕದ ಕಣ್ಣಿಗೆ ಸುಣ್ಣ ಬಳಿದಿದ್ದಾರೆಂಬ ಅಸಮಾಧಾನ ವ್ಯಕ್ತವಾಗಿದೆ.


ಬೆಳಗಾವಿ: ಬಿಕೋ ಎನ್ನುತ್ತಿರುವ ಸುವರ್ಣ ಸೌಧ.

- ಎರಡು ವರ್ಷದಿಂದ ನಡೆಯದ ಅಧಿವೇಶನ
- ಕಚೇರಿಗಳೂ ಸ್ಥಳಾಂತರವಾಗಲಿಲ್ಲ
- ಈಗ ಅಧಿವೇಶನವೂ ಬೆಂಗಳೂರಿಗೆ ಸೀಮಿತ
- ಉತ್ತರ ಕರ್ನಾಟಕದ ಅಭಿವೃದ್ಧಿಗೆ ತೊಡಕು

**ಬಿಕೋ ವಾತಾವರಣ ಅನಿವಾರ್ಯ:** ಸುಮಾರು 500 ಕೋಟಿ ವೆಚ್ಚದಲ್ಲಿ ನಿರ್ಮಾಣ ಮಾಡಿರುವ ಸುವರ್ಣ ವಿಧಾನಸೌಧ ಸದಾ ಸರ್ಕಾರದ ಚಟುವಟಿಕೆಗಳಿಂದ ಸಕ್ರಿಯವಾಗಿರಬೇಕು. ಪ್ರಮುಖ ಕಚೇರಿಗಳು ಇಲ್ಲಿಗೆ ಬರಬೇಕು. 10 ದಿನಗಳ ಬದಲಿಗೆ ಒಂದು ತಿಂಗಳು ಅಧಿವೇಶನ ನಡೆಸಬೇಕೆಂದು ಜನರು ನಿರಂತರ ಒತ್ತಾಯ ಮಾಡುತ್ತ ಬಂದಿದ್ದರೂ ಸರ್ಕಾರ ಇದಕ್ಕೆ ಸೊಪ್ಪು ಹಾಕಿಲ್ಲ. ಹೀಗಾಗಿ ಸುವರ್ಣ ವಿಧಾನಸೌಧಕ್ಕೆ ಬಿಕೋ ವಾತಾವರಣ ಅನಿವಾರ್ಯವಾಗಿದೆ. ಅಭಿವೃದ್ಧಿಗೆ ಹೊಸ ಹಾದಿ ತೋರಿಸಬೇಕಿದ್ದ ಸೌಧವು ಈಗ ಅಲಂಕಾರಿಕ ಗೊಂಬೆಯಂತಾಗಿದೆ.

ಬೆಂಗಳೂರಿನಲ್ಲೇ ಅಧಿವೇಶನ ಮಾಡುವದಾದರೆ ನೂರಾರು ಕೋಟಿ ವೆಚ್ಚ ಮಾಡಿ ಸುವರ್ಣ ವಿಧಾನಸೌಧ ನಿರ್ಮಿಸಿರುವ ಔಚಿತ್ಯವಾದರೂ ಏನಿತ್ತು. ಈ ಕಡೆ ಅಧಿವೇಶನವೂ ಇಲ್ಲ, ಇನ್ನೊಂದೆಡೆ ಪ್ರಮುಖ ಕಚೇರಿಗಳೂ ಬರುತ್ತಿಲ್ಲ. ಇದು ಉತ್ತರ ಕರ್ನಾಟಕದ ಬಗ್ಗೆ ಸರ್ಕಾರ ತೋರುತ್ತಿರುವ ಮಲತಾಯಿ ಧೋರಣೆಗೆ ಸಾಕ್ಷಿ ಎಂದು ಈ ಭಾಗದ ಜನರು ಕಟುವಾದ ಶಬ್ದಗಳಲ್ಲಿ ಸರ್ಕಾರದ ಕ್ರಮವನ್ನು ಟೀಕಿಸಿದ್ದಾರೆ.

2006ರಿಂದ 2018ರವರೆಗೆ ಇಲ್ಲಿ ನಡೆದ ಅಧಿವೇಶನಗಳಿಂದ ಯಾವುದೇ ಪ್ರಯೋಜನವಾಗಿಲ್ಲ. ಗಡಿ ಭಾಗದ ಸುಧಾರಣೆ ಆಗಿಲ್ಲ. ಹೀಗಾಗಿ ಬೆಳಗಾವಿಯಲ್ಲಿ ಅಧಿವೇಶನ ಮಾಡಿದರೆಷ್ಟು ಬಿಟ್ಟರೆಷ್ಟು ಎಂಬ ಭಾವನೆ ಜನರಲ್ಲಿ ಬಂದಿದೆ. ಈಗ ಅಧಿವೇಶನ ರದ್ದಿಗೆ ಕೊರೊನಾ ನೆಪ ಹೇಳಿದ್ದಾರೆ. ಇದರಲ್ಲಿ ಏನೂ ವ್ಯತ್ಯಾಸ ಕಾಣುತ್ತಿಲ್ಲ ಎಂಬುದು ಕನ್ನಡ ಹೋರಾಟಗಾರರ ಅಭಿಪ್ರಾಯ.

**ಬೆಳಗಾವಿಯಲ್ಲಿ ಚಳಿಗಾಲದ ಅಧಿವೇಶನ ರದ್ದು ಮಾಡಿರುವುದು ಏಕೆ ಎಂಬುದೇ ಅರ್ಥವಾಗುತ್ತಿಲ್ಲ. ಕಳೆದ ವರ್ಷ ಪ್ರವಾಹದಿಂದ ಸಾಕಷ್ಟು ಹಾನಿಯಾಗಿದೆ. ಆಗ ನಮ್ಮ ಸಹಮತ ಇತ್ತು. ಆದರೆ ಈಗ ರದ್ದು ಮಾಡಿರುವುದು ಸರಿಯಲ್ಲ. ಸರ್ಕಾರದ ನಿರ್ಧಾರ ನೋಡಿದರೆ ಸುವರ್ಣ ವಿಧಾನಸೌಧ ಮಂತ್ರಿಗಳ ಪ್ರಗತಿ ಪರಿಶೀಲನಾ ಸಭೆಗಳಿಗೆ ಸೀಮಿತವಾಗಿದೆ. ಸರ್ಕಾರ ಉಕ ಅಭಿವೃದ್ಧಿಯ ಬಗ್ಗೆ ಮೊಸಳೆ ಕಣ್ಣೀರು ಸುರಿಸುತ್ತಿರುವುದು ಸ್ಪಷ್ಟ**

• **ಲಕ್ಷ್ಮೀ ಹೆಬ್ಬಾಳಕರ,** ಬೆಳಗಾವಿ ಗ್ರಾಮೀಣ ಶಾಸಕಿ

**ಸುವರ್ಣ ವಿಧಾನಸೌಧದಲ್ಲಿ ಒಂದು ತಿಂಗಳ ಕಾಲ ಅಧಿವೇಶನ ಮಾಡಬೇಕೆಂಬ ನಮ್ಮ ಬೇಡಿಕೆಗೆ ಸರ್ಕಾರ ಇದುವರೆಗೆ ಸ್ಪಂದಿಸಿಲ್ಲ. ಪ್ರತಿ ವರ್ಷ 10 ದಿನಗಳ ಕಾಲ ಕಾಟಾಚಾರದ ಅಧಿವೇಶನ ಮಾಡುವುದನ್ನು ಬಿಟ್ಟು ಸರ್ಕಾರದ ಪ್ರಮುಖ ಕಚೇರಿಗಳನ್ನು ಇಲ್ಲಿಗೆ ಸ್ಥಳಾಂತರ ಮಾಡಲಿ. ಈಗ ಚಳಿಗಾಲದ ಅಧಿವೇಶನ ರದ್ದು ಮಾಡಿದ್ದರಿಂದ ನಮಗೆ ಯಾವುದೇ ಪರಿಣಾಮ ಕಾಣುತ್ತಿಲ್ಲ.**

• **ಅಶೋಕ ಚಂದರಗಿ,** ಕನ್ನಡ ಸಂಘಟನೆಗಳ ಕ್ರಿಯಾ ಸಮಿತಿ ಅಧ್ಯಕ್ಷ